


ಎಡದಿಂದ ಬಲಕ್ಕೆ:

1. ಆತನ ಚಿತ್ತದಲ್ಲಿ ಯಾವ ತೀರ್ಮಾನವೂ ಖಚಿತವಲ್ಲ 4
3. ವಾರಿಧಿಯ ದುರ್ಬಳಕೆಗೆ ಭಾರೀ ಪ್ರತಿಭಟನೆ 3
4. ವರ್ಷಾಂತ್ಯದ ವರೆಗೂ ಬದಲಾವಣೆ ಬೇಡವೆಂದು ಒತ್ತಾಯ 3
6. ಲಾಭಾಲಾಭದಂತೆಯೇ ಬಲ್ಲಿರಾ ಶಕ್ತಿನಿಶ್ಶಕ್ತಿ? 4
8. ಬಲ್ಲಿದರನ್ನು ಸಂರಕ್ಷಿಸಹೋದ ಸೈನಿಕನ ಪ್ರಾಣಾರ್ಪಣೆ 4
10. ಆತುರದ ಕೆಲಸಕ್ಕೆ ಇದು ಸಂಪೂರ್ಣ ಎದುರು ವಿಧ 4
12. ನಕ್ಷೆ ತೋರಿಸಿ ಯಾತ್ರಿಕರನ್ನು ಬಾಕಿಗಾಗಿ ಬೆನ್ನು ಹತ್ತುವವ 4
16. ಕರೆಸದಿದ್ದರೂ ಬಂದ ಮಹಾ ಕ್ರೂರಿ 3
17. ಪರ್ವತ ಮಾತೆ ಕಂಡೊಡನೆ ಹಿಂದು ಮುಂದಾದ ಪೆದ್ದ 3
18. ನಂಬುವುದೂ ಸುಲಭವಲ್ಲ, ಅಂಥ ಭಾರೀ ಭೂ ಸೇನೆ 4

ಮೇಲಿಂದ ಕೆಳಕ್ಕೆ:

1. ಅಮ್ಮನಿಂದಲೂ ತ್ಯಜಿಸಲ್ಪಟ್ಟ ಅತ್ಯಂತ ಕೀಳು ಮನುಷ್ಯ 3
2. ತೇರೆಳೆಯುವ ಕೆಲಸಮಾಡಲು ಅಮ್ಮನ ಊರೇ ಸರಿ 3
3. ಬಹಳವೇನಿಲ್ಲವಾದರೂ ಕೊಂಚ ತಡ 3
5. ಹೆಬ್ಬುಲಿಯಂತಿದ್ದಾನೆ ಸರಿ, ಆದರೆ ತಂದೆತಾಯಿ ಇಲ್ಲ 3
6. ಲಭಿಸುವಂತೆ ಮಾಡಲೇಬೇಕೆಂದು ತೀವ್ರ ಒತ್ತಾಯ 4
7. ಭಯದಲ್ಲಿ ಹಾಡಿದರೂ ತಾಳಕ್ಕೆ ಸರಿಯಾಗಿದೆ 4
8. ಎದೆ ಬಡಿತವನ್ನೇ ನಿಲ್ಲಿಸೀತು, ಇಂಥ ಕಾರ್ಪಣ್ಯ 4
9. ಪುಳಕವನ್ನು ತರುವಂತಹ ರುಚಿ  ಇದು ಯಾವ ರಾಜನ ಅಡುಗೆ? 4
11. ರುದ್ರನಂತೆ ಎದುರಾದ ಧೀರನಲ್ಲಿ ಅದೆಂಥ ರಕ್ತ? 3
13. ಮತ್ತೆ ಮತ್ತೆ ಅದ್ಭುತ ಕಥೆ ಬರೆವ ಭಾರೀ ಸಾಮರ್ಥ್ಯ 3
14. ವಸ್ತು ಏನೆಂದು ಗುರುತಿಸಲು ಅದರ ಕಂಪೇ ಸಾಕು 3
15. ಈ ಬಗೆಯ ಸ್ವರಕ್ಕೆ ಲಯದ ಜೋಡಣೆ ಕಿಂಚಿತ್ತೂ ಜಟಿಲವಲ್ಲ 3

---

## 16-05-2019 ಉತ್ತರಗಳು

ಎಡದಿಂದ ಬಲಕ್ಕೆ:

1. ಸಂತಸ 3. ಪ್ರಮಾದ 4. ಲಹರಿ 6. ಸಹಮತ 7.ಕೆಂಪುಸುಮ 9. ಮಹನೀಯ 11. ಮಮಕಾರ 15. ವರುಣ 16. ಮಲಿನ 17. ಸುಮ್ಮಾನ

ಮೇಲಿಂದ ಕೆಳಕ್ಕೆ:

1. ಸಂದರ್ಭ 2. ಸಲಹೆ 3. ಪ್ರಥಮ 5. ರಿಕಾಪು 6. ಸಕ್ರಮ 8. ಮಧುರ 10. ನೀರವ 12. ಮರ್ದನ 13. ಮೆಣಸು 14. ದಮನ


ಪ್ರಶ್ನಾಂಕಣ

# ಹಾರುವ ಸರ್ಪ ಇದೆಯೇ?

ಹೌದು, ಒಂದಲ್ಲ ಎರಡಲ್ಲ, ಒಟ್ಟು ಅಂತಹ ಐದು ಪ್ರಭೇದಗಳಿವೆ. 'ಕ್ರೈಸೊಪೆಲಿಯಾ' ಎಂದೇ ವರ್ಗೀಕರಿಸಲಾಗಿರುವ ಈ ಸರ್ಪಗಳು ಭಾರತವೂ ಸೇರಿದಂತೆ ದಕ್ಷಿಣ ಏಷಿಯ ಮತ್ತು ಆಗ್ನೇಯ ಏಷಿಯದ ಶ್ರೀಲಂಕಾ, ಮಲೇಷಿಯಾ, ಇಂಡೋನೇಷ್ಯಾ, ಫಿಲಿಪ್ಪೀನ್ಸ್ ಇತ್ಯಾದಿ ರಾಷ್ಟ್ರಗಳ ವೃಷ್ಟಿ ವನಗಳಲ್ಲಿ ನೆಲೆಗೊಂಡಿವೆ. ವಿಶೇಷ ಏನೆಂದರೆ, ಈ ಸರ್ಪಗಳಿರುವ ಪ್ರದೇಶಗಳಲ್ಲೇ 'ಹಾರುವ ಹಲ್ಲಿ' (ಚಿತ್ರ 2) ಮತ್ತು 'ಹಾರುವ ಅಳಿಲು'ಗಳೂ ಇವೆ.

ಆದರೂ ಹಾರುವ ಸರ್ಪ ಮತ್ತಿತರ ಇಂತಹ ಪ್ರಾಣಿಗಳ ಹಾರಾಟವನ್ನು ಹಕ್ಕಿಗಳ ಹಾರಾಟಕ್ಕೆ ಹೋಲಿಸುವುದು ಸಾಧ್ಯವಿಲ್ಲ. ಹಾರುವ ಸರ್ಪಗಳು (ಚಿತ್ರ 1) ಹಕ್ಕಿಗಳಂತೆ ನೆಲದಿಂದಾಗಲೀ, ಕೊಂಬೆ ರೆಂಬೆಗಳಿಂದಾಗಲೀ ಆಗಸಕ್ಕೇರಿ, ಇಷ್ಟ ಬಂದಂತೆ ಹಾರಾಡಿ, ಬಯಸಿದೆಡೆ ಇಳಿಯುವ ಸಾಮರ್ಥ್ಯ ಪಡೆದಿಲ್ಲ. ವಾಸ್ತವ ಏನೆಂದರೆ, ಹಾರುವ ಸರ್ಪಗಳು ಎತ್ತರದ ಸ್ಥಳಗಳಿಂದ ಕೆಳಕ್ಕೆ ಗಾಳಿಯಲ್ಲಿ ತೇಲುತ್ತ ತುಂಬ ದೂರಗಳಿಗೆ ಸಾಗುತ್ತವೆ; ಉದ್ದೇಶಿತ ಸ್ಥಳಕ್ಕೆ ಕೊಂಚ ಅತ್ತಿತ್ತ ಇಳಿಯುತ್ತವೆ, ಅಷ್ಟೆ.

ಹಾರುವ ಸರ್ಪಗಳದು ಗರಿಷ್ಠ ನಾಲ್ಕು ಅಡಿ ಉದ್ದದ ದೇಹ; ಮೃದುವಾದ ಕೊಳವೆಯಾಕಾರದ ಶರೀರ; ಅಗತ್ಯ ಬಂದಾಗ ಶರೀರವನ್ನು ತೆಳ್ಳನ್ನ ಹಾಳೆಯಂತೆ ಚಪ್ಪಟೆಯಾಗಿಸಿಕೊಳ್ಳಬಲ್ಲ ಸಾಮರ್ಥ್ಯ. ಲಘುವಾದ ವಿಷವನ್ನು ಪಡೆದಿರುವ ಈ ಸರ್ಪಗಳದು ಸಂಪೂರ್ಣ ವೃಕ್ಷ ವಾಸ. ಬೇಟೆಯಾಡಲು ಮತ್ತು ಶತ್ರುಗಳಿಂದ ತಪ್ಪಿಸಿಕೊಳ್ಳಲು, ದೂರ ದೂರದ ವೃಕ್ಷಗಳಿಗೆ ತಲುಪಲು ಈ 'ಹಾರಾಟ' ತಂತ್ರದ ಬಳಕೆ.




ಅಂತಹ ಅಗತ್ಯ ಬಂದೊಡನೆ ಹಾರುವ ಸರ್ಪ ನೆಲದಿಂದ 40 ರಿಂದ 50 ಅಡಿ ಎತ್ತರದ ಕೊಂಬೆ ತುದಿಗೆ ತೆವಳಿ ಏರುತ್ತದೆ. ಕೊಂಬೆ ತುದಿಯನ್ನು ಬಾಲದಂಚಿನಿಂದ ಹಿಡಿದು 'J' ಆಕಾರದಲ್ಲಿ ತೂಗುತ್ತದೆ; ಹಾರಿ ತಲುಪಬೇಕಾದ ಸ್ಥಳದತ್ತ ದೃಷ್ಟಿ ನೆಟ್ಟು ಬಲವಾಗಿ ಗಾಳಿಗೆ ಚಿಮ್ಮುತ್ತದೆ. ಹಾಗೆ ನೆಗೆದೊಡನೆ ದೇಹವನ್ನು ಚಪ್ಪಟೆಗೊಳಿಸಿ,'S'ಆಕಾರಕ್ಕೆ ತಂದು, ನೆಲದ ಮೇಲಿನ ಸರ್ಪ ಚಲನೆಯ ರೀತಿಯಲ್ಲೇ ಗಾಳಿಯಲ್ಲೂ ಮುನ್ನಡೆಯುತ್ತದೆ (ಚಿತ್ರ1 ರಲ್ಲಿ ಗಮನಿಸಿ). ತೆಳ್ಳಗೆ ಚಪ್ಪಟೆಗೊಳಿಸಿದ ದೇಹಾಕಾರದಿಂದ ತೇಲು ಬಲವನ್ನೂ, ತೆವಳುವಂತೆ ಬಾಗಿ ಬಳುಕುವುದರಿಂದ ಮುಂಚಲನೆಯನ್ನೂ ಪಡೆದು, ತೇಲುತ್ತ ತೇಲುತ್ತ ಗರಿಷ್ಠ 80 ಅಡಿಗಳಷ್ಟು ದೂರದವರೆಗೂ ಸಾಗಿ ಗುರಿಯತ್ತ ಬೀಳುತ್ತದೆ. ಇದು ಹಾರುವ ಸರ್ಪದ ಹಾರಾಟ ಕ್ರಮ.

ಆಕಾಶದಲ್ಲಿ ಈ ಸರ್ಪದ ಹಾರಾಟ ಅದ್ಭುತದ, ವಿಸ್ಮಯಕರವೂ ಆದ ಒಂದು ನಿಸರ್ಗ ದೃಶ್ಯ.

■ ಎನ್. ವಾಸುದೇವ್